ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ
ಸಾಕ್ಷಿಗೆ ದಿನಾಂಕಃ **27-03-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.321/2008
CW-10 PW- 8

ಸಾಕ್ಷಿದಾರರ ಹೆಸರು - ಕೆ.ಹೆಚ್.ಮುರುಗೇಶ

ವಯಸ್ಸು - 71 ವರ್ಷ

ಉದ್ಯೋಗ - ನಿವೃತ್ತ ಸಹಾಯಕ ಕಾರ್ಮಿಕ ಭವಿಷ್ಯನಿಧಿ ಆಯುಕ್ತರು

ಸಾಕೀನ - ದಾವಣಗೆರೆ

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2005 ರಿಂದ 2012 ರವರೆಗೆ ಕಾರ್ಮಿಕ ಭವಿಷ್ಯನಿಧಿ ಅಧಿಕಾರಿ ಸಬ್ ರೀಜಿನಲ್ ಆಫೀಸ್ ಹುಬ್ಬಳ್ಳಿಯಲ್ಲಿ ಕಾರ್ಮಿಕ ಭವಿಷ್ಯನಿಧಿಯ ಸಹಾಯಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಹೇಳಿಕೆಯಲ್ಲಿ ನಮ್ಮ ಕಚೇರಿಯ ಪಿಂಚಣಿ ಹಣ ಮಂಜೂರು ಮಾಡುವ ಕುರಿತು ನಮ್ಮ ಕಚೇರಿಯ ಕ್ಲರ್ಕ, ಸೆಕ್ಷನ್ ಸೂಪರವೈಸರ್ ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು ನಮ್ಮ ಕಚೇರಿಯ ರೆಕಾರ್ಡ ನೋಡಿಕೊಂಡು ಸರಿಯಾಗಿ ಪರಿಶೀಲನೆ ಮಾಡಿ ಕಳುಹಿಸಿದ ನಂತರ ನಾನು ಯಾವುದೇ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಅವರು ಕಳುಹಿಸಿದ್ದು ಸರಿ ಇರುತ್ತದೆ ಎಂದು ತಿಳಿದುಕೊಂಡು ಪಿಂಚಣಿ ಹಣ ಮಂಜೂರಿಗಾಗಿ ಸಹಿ ಮಾಡಿ ಕಳುಹಿಸಿರುತ್ತೇನೆ.

ದಿಃ 23-12-2002 ರಲ್ಲಿ ಶ್ರೀ ಎಸ್.ಸಿ ಶಿವಮಠ ಅಸಿಸ್ಟಂಟ್ ಪಿ ಎಫ್ ಕಮಿಷನರ್ ಹುಬ್ಬಳ್ಳಿ ಇವರು ಬಾತಪ್ಪ ರಾಜಪ್ಪ ಎಲಗಾರ ಈತನ ಪಿಂಚಣಿ ಹಣ ಮಂಜೂರು ಮಾಡಿ ಆತನ ಸಿಂಡಿಕೇಟ ಬ್ಯಾಂಕಿನ ಉಳಿತಾಯ ಖಾತೆಗೆ ಜಮೆ ಮಾಡಿರುತ್ತಾರೆ. ಗೋಕಾಕ ಮಿಲ್ಲಿನಲ್ಲಿ ಕೆಲಸ ಮಾಡುತಿದ್ದ ಆರೋಪಿ ನಂ.2 ರವರ ಸಹಿಯನ್ನು ನಮಗೆ ಕೊಟ್ಟು ಕಳುಹಿಸಿದ್ದು ಪೆನ್ಷನ್ ಫಾರಂ ಮೇಲೆ ಇದ್ದ ಸಹಿಗೆ ಹಾಗೂ ನಮ್ಮ ಕಚೇರಿಯಲ್ಲಿರುವ ಆರೋಪಿ ನಂ.2 ರವರ ಶ್ಯಾಂಪಲ್ ಸಹಿಯ ಕುರಿತು ಪರಿಶೀಲನೆ ಮಾಡಿ ಹಣ ಮಂಜೂರು ಮಾಡಿರುತ್ತೇನೆ.

ತನಿಖಾಧಿಕಾರಿಗೆ ನಾನು ಎಂಪ್ಲಾಯಿಸ್ ಪ್ಯಾಮಿಲಿ ಪೆನ್ಷನ್ ಸ್ಕಿಂ ಇದರ ಡಿಕ್ಲರೇಷನ್ ಫಾರಂ ನೀಡಿರುತ್ತೇನೆ. ಅದರಂತೆ ಗೋಕಾಕ ಮಿಲ್ಲಿನ ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್ ಇದರ ಆತರೈಸರ್ ಸಿಗ್ನೇಚರ್ ಎನ್ನುವ ದಾಖಲೆಯನ್ನು ನೀಡಿರುತ್ತೇನೆ ಹಾಗೂ ದಿಃ 19-12-2007 ರಂದು ಚಾಸಾ-18 ರವರು ಕೋರಿದ ಮಾಹಿತಿಗೆ ವಿವರಣೆಯನ್ನು ನೀಡಿ ಪತ್ರ ಕಳುಹಿಸಿರುತ್ತೇನೆ. ನಾನೀಗ ಸದರಿ ಪತ್ರವನ್ನು ನೋಡುತಿದ್ದು ಅದನ್ನು ನಿಪಿ-11 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-11-ಎ ಎಂದು ಗುರುತಿಸಲಾಯಿತು.

ಈ ದಿನ ಆರೋಪಿ ನಂ.2 ರವರು ಗೈರು ಹಾಜರಿದ್ದು ಆರೋಪಿ ನಂ.2 ರವರ ಪರ ವಕೀಲರು ಅಪರಾಧ ಪ್ರಕ್ರಿಯ ಸಂಹಿತೆಯ ಕಲಂ.317 ರಡಿ ಅರ್ಜಿ ಸಲ್ಲಿಸಿ ಆರೋಪಿ ನಂ.2 ರವರನ್ನು ಗುರುತಿಸುವ ಕುರಿತು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ನಂ.**2** ರವರ ಪರ ವಕೀಲರಾದ ಶ್ರೀ.ಎಂ ವೈ ಜೆ ರವರಿಂದ;

ಗೋಕಾಕ ಪೊಲೀಸ ಠಾಣೆಯವರು ನನಗೆ ತನಿಖೆ ಮಾಡುವ ಕಾಲಕ್ಕೆ ಯಾವುದೇ ನೋಟೀಸು ಕಳುಹಿಸಿರಲಿಲ್ಲ ಎಂದರೆ ಸರಿ. ನಮ್ಮ ಇಲಾಖೆಯಿಂದ ಆರೋಪಿತರ ವಿರುದ್ಧ ದೂರು ಸಲ್ಲಿಸಿರುವ ಕಾರಣ ನಾನು ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ದೂರನ್ನು ನಿಖರವಾಗಿ ಯಾರು ಸಲ್ಲಿಸಿರುತ್ತಾರೆ ಎಂಬುದು ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ. ನಮ್ಮ ಕಚೇರಿಗೆ ಪಿಂಚಣಿ ಹಣ ಕೋರಿ ಅರ್ಜಿ ಸಲ್ಲಿಸುವ ಇಲಾಖೆಯವರು ಪರಿಶೀಲನೆ ಮಾಡಿ ಕಳುಹಿಸಿರುತ್ತಾರೆ ಎಂದರೆ ಸರಿ. ಪರಿಶೀಲನಾ ಅಧಿಕಾರಿ ಪಿಂಚಣಿಗಾಗಿ ಕಳುಹಿಸಿಕೊಡುವ ಅರ್ಜಿಯ ಮೇಲೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪರಿಶೀಲನಾ ಅಧಿಕಾರಿಯ ಮಾದರಿ ಸಹಿಗಳೂ ಸಹ ನಮ್ಮ ಕಚೇರಿಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಪಿಂಚಣಿ ಹಣ ಮಂಜೂರು ಮಾಡುವ ಪೂರ್ವದಲ್ಲಿ ಅರ್ಜಿ ಕಳುಹಿಸಿದ ಪರಿಶೀಲನಾ ಅಧಿಕಾರಿಯ ಸಹಿ ಮತ್ತು ನಮ್ಮ ಕಚೇರಿಯಲ್ಲಿರುವ ಪರಿಶೀಲನಾ ಅಧಿಕಾರಿಯ ಮಾದರಿ ಸಹಿಗಳನ್ನು ತುಲನೆ ಮಾಡಿ ಪಿಂಚಣಿ ಆದೇಶ ಮಾಡುತ್ತೇವೆ ಎಂದರೆ ಸರಿ. ಸದರಿ ಆದೇಶವಾದ ನಂತರ ಪಿಂಚಣಿದಾರರ ಉಳಿತಾಯ ಖಾತೆಗೆ ಹಣ ಜಮೆಯಾಗುತ್ತದೆ ಎಂದರೆ ಸರಿ. 2007 ನೇ ಸಾಲಿನಲ್ಲಿ ಈ ಪ್ರಕರಣದ ಪಿಂಚಣಿ ಹಣ ದುರ್ಬಳಕೆಯಾಗಿರುವುದು ನಮಗೆ ಗೊತ್ತಾಗಿರುತ್ತದೆ. ನಂತರ ನಮ್ಮ ಇಲಾಖೆಯವರು ಆರೋಪಿತರ ವಿರುದ್ಧ ದೂರು ದಾಖಲಿಸಿರುತ್ತಾರೆ.

ನಮ್ಮ ಇಲಾಖೆಯವರು ಈ ಪ್ರಕರಣದ ಪಿಂಚಣಿ ಹಣ ದುರ್ಬಳೆಯಾಗಿರುವುದನ್ನು ಮರಳಿ ಪಡೆಯುವುದಕ್ಕಾಗಿ ಯಾವುದಾದರೂ ಕಾನೂನು ಕ್ರಮ ತೆಗೆದುಕೊಂಡಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳ ಮುಂದೆ ನಾನು ಈ ಪ್ರಕರಣದ ಕುರಿತು ದಿಃ 13-12-2007 ರಂದು ಹೇಳಿಕೆ ನೀಡಿರುತ್ತೇನೆ. ಸದರಿ ನನ್ನ ಹೇಳಿಕೆಯಲ್ಲಿ ಆರೋಪಿತರ ಹೆಸರು ತಿಳಿಸಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. ನನ್ನ ಕೆಳ ಅಧಿಕಾರಿಗಳಾದ ಆಫಿಸ್ ಕ್ಲರ್ಕ, ಸೆಕ್ಷನ್ ಸೂಪರವೈಸರ್ ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು ಪರಿಶೀಲನೆ ಮಾಡಿ ಕಳುಹಿಸಿದ ನಂತರ ನಾನು ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಹಾಗೆ ಸಹಿ ಮಾಡುವ ಪೂರ್ವದಲ್ಲಿ ಪುನಃ ದಾಖಲೆಗಳನ್ನು ಪರಿಶೀಲನೆ ಮಾಡದೆ ಸಹಿ ಮಾಡುತ್ತೇನೆ ಎಂದರೆ ಸರಿ. ಆರೋಪಿ ನಂ.2 ರವರ ಕಚೇರಿಯಲ್ಲಿ ಅವರ ಸಿಬ್ಬಂದಿಗಳು ಪರಿಶೀಲನೆ ಮಾಡಿ ಸಹಿ ಮಾಡಿ ನೀಡಿದ ವರದಿಯನ್ನು ಆರೋಪಿ ನಂ.2 ರವರು ನಮ್ಮ ಕಚೇರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಆರೋಪಿ ನಂ.2 ರವರು ಯಾವುದೇ ಹಣವನ್ನು ದುರ್ಬಳಕೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ-11 ರ ದಾಖಲೆಯನ್ನು ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೆ. ಕೇ. ಸರಿ ಇದೆ,**

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.